ದಿನಗಳಲ್ಲಿ ಹಪ್ಪಳ ಕೊಳ್ಳುವ ಕ್ರಮ ಇರಲಿಲ್ಲ. ಹಳ್ಳಿಗಳಲ್ಲಂತೂ ಮದ್ವೆ ಮನೆಯವರು ಒಂದು ರಾಶಿ ಹಪ್ಪಳದಿಟ್ಟು ತಯಾರಿಸಿ ಕುಲಬಾಂಧವರ ಮನೆಗೆ ಹಂಚಿಬಿಡುತ್ತಿದ್ದರು. ಆಯಾ ಮನೆಯವರು ಹಪ್ಪಳ ಒತ್ತಿ ಒಣಗಿಸಿಕೊಡುತ್ತಿದ್ದರು. ಹೀಗೆ ಸಾವಿರಾರು ಹಪ್ಪಳಗಳು ಸಾಮೂಹಿಕ ಪರಿಶ್ರಮದಿಂದ ತಯಾರಾಗುತ್ತಿದ್ದವು. ಕಲ್ಯಾಣಿ ಮತ್ತವಳ ಗೆಳತಿಯರಾದ ಗಂಗೂ, ನಿಂಗೂ, ವಿಜಿ ಅದೆಷ್ಟು ಹಪ್ಪಳದ ಬಟ್ಟಿಗಳನ್ನು ತಿಂದರೊ, ಆಹಾ! ಆ ಹಸಿಹಿಟ್ಟಿನಲ್ಲಿ ಬೆರೆತ ಉಪ್ಪು, ಮೆಣಸು, ಉದ್ದಿನ ಮಿಶ್ರಣದ ರುಚಿ ನೆನಪಿಸಿಕೊಂಡರೆ ಕಲ್ಯಾಣಿಗೆ ಈಗಲೂ ಬಾಯಲ್ಲಿ 'ಜುಮ್' ಅಂತ ನೀರೂರುತ್ತದೆ.

ಇತ್ತಲಿನಲ್ಲಿ ಗಣೆಬೋರ, ಕುಂಡಿಮುದ್ದ ಸೇರಿಕೊಂಡು ಮರದ ಕೊಂಟುಗಳನ್ನು ಸೀಳಿ ಸೌದೆ ಒಡೆದು, ಸೌದೆ ಸೀಳುಗಳನ್ನು ಅದಕ್ಕೆಂದೇ ಮೀಸಲಾದ ಚಪ್ಪರದಲ್ಲಿ ಪೇರಿಸಿದರು. ಪಕ್ಕದಲ್ಲೇ ಇದ್ದ ವಿಶಾಲವಾದ ಎತ್ತುಗಳ ಕೊಟ್ಟಿಗೆ ಪಾಕಶಾಲೆಯಾಗಿ ಪರಿವರ್ತನೆ ಆಯಿತು. ದೊಡ್ಡ ದೊಡ್ಡ ಒಲೆಗಳನ್ನ ಹಾಕಿದರು. ಆಳೆತ್ತರದ ಹಂಡೆಗಳು, ದೇಕ್ಸ, ಜಾಲರಿ, ಸೌಟುಗಳು ಶೇಖರಗೊಂಡವು. ಚಿಕ್ಕಿಯ ಮದುವೆ ತಯಾರಿ ಯಾವ ಮಾಯಾಬಜಾರಿಗೂ ಕಡಿಮೆ ಇರಲಿಲ್ಲ.

ಮದುವೆ ದಿನ ಹತ್ತಿರವಾದಂತೆ ಆ ವಿಶಾಲವಾದ ತೊಟ್ಟಿ ಮನೆಯಲ್ಲಿ ಪೂರ್ವ ದಿಕ್ಕಿಗೆ ಎದುರಾಗಿರುವ ಹಜಾರದ ಗೋಡೆ ಮೇಲೆ ಹಸೆ ಬರೆಯುವ ಕೆಲಸ ಪ್ರಾರಂಭವಾಯ್ತು. ಕಲ್ಯಾಣಿ, ವಿಜಿ, ಗಂಗೂ, ನಿಂಗೂ ಮುಂತಾದ ಹೈಕಳೆಲ್ಲಾ ಹಸೆ ಬರೆಯುವವನ ಹಿಂದೆ ಕೌಚುಗಾಲು ಹಾಕಿ ಕುಳಿತು ಗೋಡೆಯ ಕಡೆ ದಿಟ್ಟಿಸಲಾರಂಭಿಸಿದರು. ಅವನು ಹಸಿರು, ನೀಲಿ ಮುಂತಾದ ಬಣ್ಣಗಳಿಂದ ಸೂರ್ಯ, ಚಂದ್ರ, ಬಾಳೆಹಣ್ಣು ಇತ್ಯಾದಿಗಳನ್ನು ಬರೆದು ಸುತ್ತಲೂ ಮೆಟ್ಟಿಲು ಮೆಟ್ಟಿಲಾಗಿ ಅಂಚು ಕಟ್ಟಿದ, ಗೋಡೆಯ ಎತ್ತರಕ್ಕೂ ಹಸೆ ತುಂಬಿಕೊಂಡಿತು. ಚಿಕ್ಕಜ್ಜಿಯ ಮನೆಗೆ ಮದುವೆ ಮನೆಯ ಕಳೆ ಬಂದು ಬಿಟ್ಟಿತು.

ಮದುವೆಯ ದಿನ... ಸಾಲಂಕೃತ ವಧುವಾಗಿ ಚಿಕ್ಕಿ ಶೋಭಿಸುತ್ತಿದ್ದಾಳೆ. ಅವಳ ನೀಳ ಜಡೆಗೆ ಜಡೆ ಬಂಗಾರ ಕುಚ್ಚು ಹಾಕಿದ್ದಾರೆ. ರೇಶಿಮೆ ಸೀರೆ ಮೇಲೆ ಡಾಬು, ಚಿಕ್ಕಿ ತಲೆ ತಗ್ಗಿಸಿ ಧಾರೆಗೆ ನಿಂತಿದ್ದಾಳೆ. ಕೆನ್ನೆಯಲ್ಲಿ ಚಂದ್ರವನ್ನು ಕಡ್ಡಿಯಲ್ಲಿ ಎಳೆದ ಚೇಪು. ನೆತ್ತಿಯಲ್ಲಿ ಕಣಿಗಲೆಯ ದಂಡೆ, ಕಂಕಣ ಕಟ್ಟಿದ ಕೈಯಲ್ಲಿ ಕಪ್ಪುಬಳೆ ಮತ್ತು ಚಿನ್ನದ ಬಳೆಗಳು, ಚಿಕ್ಕಿ ಮತ್ತು ಚಿಕ್ಕಪ್ಪನಾಗುವವರು ಧಾರೆಗೆ ನಿಂತಿದ್ದಾರೆ. ತಂದೆ ತಾಯಿ ಮತ್ತು ಬಳಗವೆಲ್ಲಾ ವಧೂ ವರರ ಕೈಗಳ ಮೇಲೆ ಹಾಲಿನಿಂದ ಧಾರೆ ಎರೆದರು. ಹುಡುಗ ಚಿಕ್ಕಿಯ ಕೊರಳಿಗೆ ಮಾಂಗಲ್ಯ ಕಟ್ಟಿದ. ಇಬ್ಬರೂ ಒಬ್ಬರಿಗೊಬ್ಬರು ಒಂದೊಂದೇ ಕಣಿಗಲೆ ಹೂವಿನಿಂದ ಕಟ್ಟಿದ ಸಂಬಂಧ ಮಾಲೆ ಹಾಕಿ, ಅವುಗಳ ತುದಿಯನ್ನು ನುಲಿದರು – ತಮ್ಮಿಬ್ಬರ ಸಂಬಂಧ ಗಟ್ಟಿಯಾಯಿತು ಎಂಬಂತೆ.

ಮದುವೆಗೆ ಬಂದ ಕಿಕ್ಕಿರಿದ ಜನ ಸಮೂಹ. ಅಲ್ಲಲ್ಲಿ ಗಂಡಸರು ಬೀಸಣಿಗೆಯಿಂದ ಗಾಳಿ ಹಾಕಿಕೊಳ್ಳುತ್ತಿದ್ದಾರೆ. ಹೆಂಗಸರಿಗೆ ಆ ಸುಖವಿಲ್ಲ! ಎಷ್ಟೊ ಹೆಂಗಸರ ಹಣೆಯಲ್ಲಿ ಬೆವರ ಹನಿಗಳು ಮುತ್ತಿನಂತೆ ಮೂಡಿವೆ. ಕುಂಕುಮ ಕಲೆಸಿದೆ. ಉಟ್ಟಿರುವ ರೇಷ್ಮೆ ಸೀರೆಗಳ ಮುಸುಕಿನಲ್ಲಿ ಬೆವರಿಳಿಸುತ್ತ ಕುಳಿತಿರುವ ಹೆಂಗಸರಿಗೆ ಅರಿಸಿನ, ಕುಂಕುಮ, ಮಲ್ಲಿಗೆ ಹೂ, ಗಂಧಗಳನ್ನು ಕೊಡುತ್ತಿದ್ದಾರೆ. ನೆರೆದಿದ್ದ ಜನರಿಗೆ ಪನ್ನಿರದಾನಿಯಿಂದ ಪನ್ನೀರನ್ನು ಚಿಮುಕಿಸುತ್ತಿದ್ದಾರೆ. ಮಲ್ಲಿಗೆ, ಗಂಧ, ಪನ್ನೀರುಗಳ ಸುಗಂಧ ಆ ಬೇಸಿಗೆಯ ಮದುವೆ ಚಪ್ಪರದಲ್ಲಿ ಒಂದು ಗಂಧರ್ವ ಲೋಕವನ್ನು ಸೃಷ್ಟಿಸಿತ್ತು.

★★★

ಬರುಬರುತ್ತ ಕಲ್ಯಾಣಿ ಹೆಚ್ಚಿನ ತರಗತಿಗಳಿಗೆ ಹೋದಂತೆ ಅಜ್ಜಿ ಊರಿನಲ್ಲಿ ದೀರ್ಘಕಾಲ ನಿಲ್ಲುವುದು ಕಮ್ಮಿ ಆಯಿತು. ಆದರೂ ವರ್ಷಕ್ಕೊಂದು ಸಲ ಚುಟುಕಾಗಿಯಾದರೂ ಚಿಕ್ಕಿಯನ್ನು ಭೇಟಿ ಮಾಡುತ್ತಲೇ ಇದ್ದಳು.